## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1111 |
| ಸದಸ್ಯರ ಹೆಸರು | : ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 22.09.2022 |
| ಉತ್ತರಿಸುವ ಸಚಿವರು | : ಜಲಸಂಪನ್ಮೂಲ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ನಂದವಾಡಗಿ ಲಿಫ್ಟ್ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಂದವಾಡಗಿ ಏತ ನೀರಾವರಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಿ ಸುಮಾರು 36,100 ಹೆಕ್ಟೇರ್ (89,203 ಎಕರೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ರೂ.1,530.00 ಕೋಟಿ ಮೊತ್ತದ ಅಂದಾಜಿಗೆ (ಹೆಚ್ಚುವರಿ ಲಭಿಸಬಹುದಾದ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಸೂಕ್ತ ಅವಕಾಶಗಳೊಂದಿಗೆ) ದಿನಾಂಕ:01.03.2014 ರ ಆದೇಶದನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಪ್ರಸ್ತುತ ಕಾಮಗಾರಿಯ ಯಾವ ಹಂತದಲ್ಲಿದೆ; | ಈಗಾಗಲೇ, ಯೋಜನೆಯಡಿ ರೂ.207.00 ಕೋಟಿ ಗುತ್ತಿಗೆ ಮೊತ್ತದಲ್ಲಿ ಟರ್ನ್ ಕೀ ಆಧಾರದ ಮೇಲೆ ಕೈಗೆತ್ತಿಕೊಂಡ ಮುಖ್ಯ ಸ್ಥಾವರ ನಿರ್ಮಾಣದ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. |
| ಇ) | ಕಾಮಗಾರಿಯನ್ನು ಪೂರ್ಣಗೊಳಿಸಲು ವಿನಿಯೋಗಿಸಲಾದ ವೆಚ್ಚ ಮತ್ತು ಅವಧಿ ಎಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು) | ಪ್ರಸ್ತುತ ಯೋಜನೆಯಡಿ ಹನಿ ನೀರಾವರಿ ಪದ್ಧತಿ ಅಳವಡಿಸಿ ಒಟ್ಟು 36,100 ಹೆಕ್ಟೇರ್ (89,203 ಎಕರೆ) ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸಲು 3 ಪ್ಯಾಕೇಜ್‌ಗಳಲ್ಲಿ ಕಾಮಗಾರಿಗಳನ್ನು ಟರ್ನ್ ಕೀ ಆಧಾರದ ಮೇಲೆ ಗುತ್ತಿಗೆ ವಹಿಸಲಾಗಿದ್ದು, ಸದರಿ ಪ್ಯಾಕೇಜ್‌ವಾರು ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದ್ದು, ಪ್ಯಾಕೇಜ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿನಿಯೋಗಿಸಲಾದ ವೆಚ್ಚ ಮತ್ತು ಅವಧಿಯ ವಿವರಗಳು ಈ ಕೆಳಗಿನಂತಿವೆ; (ರೂ. ಕೋಟಿಗಳಲ್ಲಿ) |

(ರೂ. ಕೋಟಿಗಳಲ್ಲಿ)

| ಕ್ರ ಸಂ. | ಕಾಮಗಾರಿ ಹೆಸರು | ಒಡಂಬಡಿಕೆ ಮೊತ್ತ | ವೆಚ್ಚ | ಕಾಮಗಾರಿ ಪ್ರಸ್ತುತ ಹಂತ | ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಅವಧಿ |
|---|---|---|---|---|---|
| 1 | ನಂದವಾಡಗಿ ಏತ ನೀರಾವರಿ ಮೊದಲನೇ ಹೆಡ್‌ವರ್ಕ ಕಾಮಗಾರಿ | 207.00 | 182.07 | ಕಾಮಗಾರಿ ಪೂರ್ಣಗೊಂಡಿದ್ದು ಪ್ರಾಯೋಗಿಕ ಚಾಲನೆಗೆ ಒಳಪಡಿಸಲಾಗಿರುತ್ತದೆ. | ಪೂರ್ಣಗೊಂಡಿದೆ. |
| 2 | ನಂದವಾಡಗಿ ಏತ ನೀರಾವರಿ ಯೋಜನೆ ಪ್ಯಾಕೇಜ-1 | 615.59 | 185.30 | ಕಾಮಗಾರಿ 35% ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | 31-12-2023 |
| 3 | ನಂದವಾಡಗಿ ಏತ ನೀರಾವರಿ ಪ್ಯಾಕೇಜ್-2 | 612.07 | 271.05 | ಕಾಮಗಾರಿ 50% ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | 31-12-2023 |
| 4 | ನಂದವಾಡಗಿ ಏತ ನೀರಾವರಿ ಯೋಜನೆ ಪ್ಯಾಕೇಜ್-3 | 591.82 | 439.41 | ಕಾಮಗಾರಿ 75% ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | 31-03-2023 |

ಜಸಂಇ 113 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು